**ದಕ್ಷಿಣ ಭಾರತ ಸಭೆ**

# 70ನೇ ವಾರ್ಷಿಕೋತ್ಸವದ ಸಂಭ್ರಮಾಚರಣೆ

**ಮುಖ್ಯ ಪ್ರಸ್ತಾಪ: ಕ್ಷಮಾಪಣೆ ಮತ್ತು ಸಂಧಾನದ ಕಡೆಗಿನ ಯಾತ್ರಾ ಪಯಣ**

**24ನೇ ಸೆಪ್ಟಂಬರ್ 2017**

## ಆರಾಧನಾ ಕ್ರಮ

**ಆರಾಧನೆಗೆ ಕರೆ**

**ನಾಯಕ/ಕಿ:** ನಿತ್ಯವೂ ಕ್ಷಮಿಸುವ ಓ ದೇವರೇ, ಸಿ.ಎಸ್.ಐ. ಭಾನುವಾರವನ್ನು ಸ್ಮರಿಸುವ ನಾವು ನಿನ್ನ ಸಾನಿಧ್ಯ ಪ್ರಸನ್ನತೆಯನ್ನು ನಮ್ಮ ಮಧ್ಯೆ ಆಹ್ವಾನಿಸುತ್ತೇವೆ.

ಕುಮಾರನಾದ ಓ ದೇವರೇ, ಸಂಧಾನಪಡಿಸುವ ಕ್ರಿಸ್ತನೇ, ಐಕ್ಯಮತ್ಯದ ಸ್ಪೂರ್ತಿಯನ್ನು ಸಿ.ಎಸ್.ಐ.ನ ಇತರ ಎಲ್ಲಾ ಸದಸ್ಯರೊಂದಿಗೆ ಆಚರಿಸುವಲ್ಲಿ, ನಮ್ಮನ್ನು ತಂದೆಯಾದ ದೇವರೊಂದಿಗೆ ಸಂಧಾನಪಡಿಸಿದ ನಿನ್ನ ಕೃಪೆಯನ್ನೂ ಕರುಣೆಯನ್ನೂ ಆಹ್ವಾನಿಸುತ್ತೇವೆ.

ಪಾವನಾತ್ಮನಾದ ಓ ದೇವರೇ, ಆರಾಧನೆಯನ್ನು ನಾವು ಮುಂದುವರಿಸುವಲ್ಲಿ, ಮುರಿಯಲ್ಪಟ್ಟ ಮಾನವೀಯತೆಗೂ ಮತ್ತು ಲೋಕಕ್ಕೂ ಕ್ಷಮಾಪಣೆಯನ್ನು ಮತ್ತು ಸಂಧಾನವನ್ನು ಪಸರಿಸಲು ಸ್ಪೂರ್ತಿಗೊಳಿಸು.

ಕ್ರಿಸ್ತನಲ್ಲಿ ಪ್ರೀತಿಯ ಸಹೋದರಿ ಮತ್ತು ಸಹೋದರರೇ, ಸಮೃದ್ಧ ಜೀವನ, ಅತಿಶಯವಾದ ಸಮಾಧಾನ ಮತ್ತು ನಿಕಟವಾದ ಅನ್ಯೋನ್ಯತೆಯನ್ನು ದಕ್ಷಿಣ ಭಾರತ ಸಭೆಯ ಮುಖಾಂತರ ಅನುಭವಿಸಲು ನಮ್ಮನ್ನು ಕರೆದ ತ್ರಯೈಕ ದೇವರ ನಾಮದಲ್ಲಿ ನಾವು ಕೂಡಿಬಂದಿದ್ದೇವೆ.

ದೇವರೊಂದಿಗೆ ನಮ್ಮನ್ನೂ ಸೃಷ್ಟಿಯನ್ನೂ ಸಂಧಾನಪಡಿಸಲು ಯೇಸು ಕ್ರಿಸ್ತನು ತನ್ನ ಮರಣ ಮತ್ತು ಪುನರುತ್ಥಾನದ ಮುಖಾಂತರ ವೈರತ್ವದ ಗೋಡೆಗಳನ್ನು ಮುರಿದು ಹಾಕಿದ್ದಾನೆ ಮತ್ತು ನಮಗೆ ಸಂಧಾನದ ನಿಯೋಗವನ್ನು ವಹಿಸಿದ್ದಾನೆ.

ಕ್ಷಮಾಪಣೆಯ ಮತ್ತು ಸಂಧಾನದ ಈ ಯಾತ್ರಾ ಪಯಣದಲ್ಲಿ, ದೇವರು ನಮ್ಮ ತಪ್ಪುಗಳನ್ನು ಕ್ಷಮಿಸುತ್ತಲೇ ಇದ್ದಾನೆ, ಹೀಗಿರುವಲ್ಲಿ ನಾವು ಕೂಡ ನಮಗೆ ವಿರುದ್ಧವಾಗಿ ಮಾಡಿದ ತಪ್ಪುಗಳನ್ನು ಕ್ಷಮಿಸುವಂತೆ ನಮ್ಮನ್ನು ನಾವೇ ಒಪ್ಪಿಸಿಕೊಡೋಣ.

**ಸಭೆ: ಕ್ಷಮಾಪಣೆಯ ಮತ್ತು ಸಂಧಾನದ ದೇವರೇ, ಈ ಯಾತ್ರಾ ಪಯಣದಲ್ಲಿ ಪರಸ್ಪರರೊಂದಿಗೆ ಮತ್ತು ನಿನ್ನ ಸೃಷ್ಟಿಯೊಂದಿಗೆ ಐಕ್ಯತೆಯನ್ನು ದೃಢಪಡಿಸುವುದಕ್ಕೆ ನಮ್ಮನ್ನು ನಿನ್ನ ಪ್ರೀತಿಯ ಸಾಧನಗಳಾಗಿ ರೂಪಿಸು . ಆಮೆನ್**

**ಆರಂಭದ ಸಂಗೀತ :**

**ಆರಂಭದ ಪ್ರಾರ್ಥನೆ**

**ನಾಯಕ/ಕಿ:** ಸೃಷ್ಟಿ ಕರ್ತನಾದ ನಮ್ಮ ದೇವರೇ, ಈ ಲೋಕದ ಯಾತ್ರಾ ಪಯಣಕ್ಕೆ ಏಕೈಕ ಕುಮಾರನನ್ನು ಕಳುಹಿಸಿಕೊಟ್ಟಾತನೇ, ಈ ಭೂಮಿಯ ಮೇಲಿನ ಯಾತ್ರಾ ಪಯಣದಲ್ಲಿ ಜೀವನವನ್ನು ಉಡುಗೊರೆಯಾಗಿ ನೀಡಿರುವುದಕ್ಕಾಗಿ ನಾವು ನಿನಗೆ ಕೃತಜ್ಞರಾಗಿದ್ದೇವೆ. ನಮ್ಮ ಜೊತೆ ಯಾವಾಗಲೂ ಸಹ ಪ್ರಯಾಣಿಕನಾಗಿದ್ದು, ನಮ್ಮ ವೈಯಕ್ತಿಕ ಮತ್ತು ಸಾಮುದಾಯಿಕ ಜೀವನದಲ್ಲಿ ನಿನ್ನ ಕ್ಷಮಾಪಣೆಯನ್ನು ನಾವು ಅನುಭವಿಸುವಂತೆ ಮಾಡಿದ್ದೀ. ನೋವನ್ನು ಕೊಡುವ ಲೋಕಕ್ಕೆ ನಿನ್ನ ಕ್ಷಮೆಯ ಸಾಧನವಾಗಿ ಮುಂದುವರಿಯಲು ಮತ್ತು ನಮ್ಮನ್ನು ನಿನ್ನ ಜೊತೆ ಕೆಲಸದವರಾಗಿರಲು ಬಲಪಡಿಸುತ್ತಲೇ ಇರು ಎಂದು ಬೇಡುತ್ತೇವೆ. ಕ್ರಿಸ್ತನು ನಮಗೆ ಕೈವರ್ತಿಸಿದ ಸಂಧಾನದ ನಿಯೋಗವನ್ನು ಪವಿತ್ರಾತ್ಮನ ಸಹಾಯದಿಂದ ನಮ್ಮಲ್ಲಿ ಮುಂದುವರಿಸಿ ನಮ್ಮ ಬದ್ಧತೆಯನ್ನು ಹೆಚ್ಚಿಸೆಂದು ಈ ವಿಶೇಷ ದಿನದಲ್ಲಿ ಪ್ರಾರ್ಥಿಸುತ್ತೇವೆ. ಆಮೆನ್.

**ದಕ್ಷಿಣ ಭಾರತ ಸಭೆಯ ಯಾತ್ರಾ ಪ್ರಯಾಣಕ್ಕಾಗಿ ದೇವರಿಗೆ ಉಪಕಾರ ಸ್ತುತಿ ಮಾಡೋಣ.**

**ನಾಯಕ/ಕಿ:** ಜೀವನ ಮತ್ತು ಚರಿತ್ರೆಯ ದೇವರೇ, ದಕ್ಷಿಣ ಭಾರತ ಸಭಾ ಜೀವನದ 70 ವರ್ಷಗಳ ನಿನ್ನ ಒಳ್ಳೇತನ ಮತ್ತು ನಂಬಿಗಸ್ತಿಕೆಗಾಗಿ ನಿನ್ನನ್ನು ಸ್ಮರಿಸುತ್ತೇವೆ. ಸಿನೋಡ್‌ನ ಪ್ರತಿ ಕೂಟಗಳಲ್ಲಿ ನಡೆದ ಚರ್ಚೆಗಳ ಮುಖಾಂತರ ನಿನ್ನ ನಿಯೋಗದ ಮಾರ್ಗವನ್ನು ಪ್ರಕಟಿಸಲು ಈ ಸಭೆಗೆ ನಿನ್ನ ದಾರಿಯನ್ನು ತೋರಿಸಿರುವೆ.

**ನಾಯಕ/ಕಿ:** ಮಾರ್ಚ್1948ರಲ್ಲಿ, ಜನವರಿ 1950ರಲ್ಲಿ ಮತ್ತು ಜನವರಿ 1952ರಲ್ಲಿ – ದಕ್ಷಿಣ ಭಾರತ ಸಭೆಯು ನಿನ್ನ ನಂಬಿಕೆ ಮತ್ತು ಪ್ರೀತಿಯ ಮೇಲೆ ಆತುಕೊಳ್ಳಲು ಪ್ರಪ್ರಥಮವಾಗಿ ತನ್ನ ಪುಟ್ಟ ಪುಟ್ಟ ಹೆಜ್ಜೆಗಳನ್ನು ಇಡಲು ನೀನು ಪ್ರೋತ್ಸಾಹ ನೀಡಿದೆ.

**ಸಭೆ: ಹಲ್ಲೆಲೂ ಹಲ್ಲೆಲೂ ಹಲ್ಲೆಲೂ ಹಲ್ಲೆಲೂಯಾ, ಕೊಂಡಾಡಿರಿ (ಸ್ತುತಿಸಿರಿ)**

**ನಾಯಕ/ಕಿ:** ಜನವರಿ 1954ರಲ್ಲಿ ಮದ್ರಾಸಿನಲ್ಲಿ – ಭಾರತದ ಸಭೆಯು ಹೇಗಿರಬೇಕು ಎಂತಾಗಬೇಕು ಎಂದು ಸಭಾರೂಪುಗೊಳ್ಳುವಿಕೆಯ ಚರ್ಚೆಗಳಲ್ಲಿ ಸ್ಪೂರ್ತಿ ನೀಡಿದೆ. ಜನವರಿ 1956ರಲ್ಲಿ ತಿರುಚಿರಪಳ್ಳಿಯಲ್ಲಿ ಮತ್ತು ಜನವರಿ 1958ರಲ್ಲಿ ನಾಗರಕೋಯಿಲ್‌ನಲ್ಲಿ – ಒಟ್ಟಾಗಿ ನಾವು ಬೆಳೆಯಲು ಆಲೋಚನೆಯನ್ನು ನೀಡಿ ಪ್ರೋತ್ಸಾಹಿಸಿದ್ದೀ ಮತ್ತು ನಿಯೋಗಿಕ ಜವಾಬ್ದಾರಿಯೊಂದಿಗೆ ಭಾರತೀಯ ಸಭೆಯಾಗಿ ನಮ್ಮನ್ನು ರೂಪಿಸಿದೆ

**ಸಭೆ: ಹಲ್ಲೆಲೂ ಹಲ್ಲೆಲೂ ಹಲ್ಲೆಲೂ ಹಲ್ಲೆಲೂಯಾ, ಕೊಂಡಾಡಿರಿ (ಸ್ತುತಿಸಿರಿ)**

**ನಾಯಕ/ಕಿ:** ಜನವರಿ 1960ರಲ್ಲಿ ಬೆಂಗಳೂರಿನಲ್ಲಿ – ನಮ್ಮ ಕರ್ತನಾದ ಯೇಸುಕ್ರಿಸ್ತನು ಲೋಕದ ಬೆಳಕಾಗಿದ್ದಾನೆಂದು ತಿಳಿಯಲು ನಿನ್ನ ಕರೆಯನ್ನು ನೀಡಿದ್ದೀ. ಜನವರಿ 1962ರಲ್ಲಿ ಪಾಲಯಂಕೋಟ್ಟೈನಲ್ಲಿ, ಜನವರಿ 1964ರಲ್ಲಿ ಸಿಕಂದ್ರಾಬಾದ್‌ನಲ್ಲಿ – ಸಮುದಾಯದ ಮೇಲಿರುವ ಸಭೆಯ ಕಾಳಜಿಯನ್ನು ಪ್ರತಿಬಿಂಬಿಸಲು ನಮಗೆ ಸ್ಪೂರ್ತಿ ನೀಡಿದೆ

**ಸಭೆ: ಹಲ್ಲೆಲೂ ಹಲ್ಲೆಲೂ ಹಲ್ಲೆಲೂ ಹಲ್ಲೆಲೂಯಾ, ಕೊಂಡಾಡಿರಿ (ಸ್ತುತಿಸಿರಿ)**

**ನಾಯಕ/ಕಿ:** ಜನವರಿ 1966ರಲ್ಲಿ ಕೋಟಯಂನಲ್ಲಿ – ದೇವರ ಮಾರ್ಗವನ್ನು ಸಿದ್ದಪಡಿಸಲು ನಮಗೆ ಜ್ಞಾಪಕ ಮಾಡಿದ್ದೀ. ಜನವರಿ 1968ರಲ್ಲಿ ಕೊಯಂಬತ್ತೂರ್‌ನಲ್ಲಿ – ಸಭೆಯ ನೆರೆಹೊರೆಯ ಸೇವೆಯ ದೃಷ್ಟಿಯನ್ನು ದೃಢಪಡಿಸಲು ಪ್ರೋತ್ಸಾಹ ನೀಡಿದ್ದೀ. ಜನವರಿ1970ರಲ್ಲಿ ತಾಂಬರಂನಲ್ಲಿ – ಸೇವಕನಾದ ಕರ್ತನಿಗೆ ಸೇವಕರಾಗಿರಲು ಜ್ಞಾಪಕಪಡಿಸಿದ್ದೀ

**ಸಭೆ: ಹಲ್ಲೆಲೂ ಹಲ್ಲೆಲೂ ಹಲ್ಲೆಲೂ ಹಲ್ಲೆಲೂಯಾ, ಕೊಂಡಾಡಿರಿ (ಸ್ತುತಿಸಿರಿ)**

**ನಾಯಕ/ಕಿ:** ಜನವರಿ 1972ರಲ್ಲಿ ತಾಂಬರಂನಲ್ಲಿ – ಕ್ರಿಸ್ತನು ಲೋಕಕ್ಕೆ ರಕ್ಷಕನೆಂಬುದನ್ನು ಕಾಣಲು ಮತ್ತೊಂದಾವರ್ತಿ ಜ್ಞಾಪಕಪಡಿಸಿದ್ದೀ. ಜನವರಿ 1974ರಲ್ಲಿ ಮದ್ರಾಸಿನಲ್ಲಿ – ಸಭೆಯು ಪ್ರಯಾಸಗಳ ಮಧ್ಯೆಯೂ ನ್ಯಾಯವಾದ ಸಮಾಜಕ್ಕಾಗಿಯೇ ಇದೆ ಎಂಬುದನ್ನು ನೆನಪಿಸಿದ್ದೀ ಮತ್ತು 1976ರಲ್ಲಿ ತ್ರಿಚಿಯಲ್ಲಿ ಯೇಸು ಬಿಡುಗಡೆಗೊಳಿಸುತ್ತಾನೆ ಮತ್ತು ಒಗ್ಗೂಡಿಸುತ್ತಾನೆ ಎಂದು ತಿಳಿಯಲು ಪ್ರೇರೇಪಿಸಿದ್ದೀ

**ಸಭೆ: ಹಲ್ಲೆಲೂ ಹಲ್ಲೆಲೂ ಹಲ್ಲೆಲೂ ಹಲ್ಲೆಲೂಯಾ, ಕೊಂಡಾಡಿರಿ (ಸ್ತುತಿಸಿರಿ)**

**ನಾಯಕ/ಕಿ:** ಜನವರಿ 1978ರಲ್ಲಿ ಕೋಟಯಂನಲ್ಲಿ – ಪವಿತ್ರಾತ್ಮನ ಬಲದಿಂದಲೇ ಸಭೆಯು ಮುಂದುವರಿಯುತ್ತದೆ ಎಂಬುದನ್ನು ತಿಳಿಯಪಡಿಸಿ ನಮ್ಮನ್ನು ಪ್ರೋತ್ಸಾಹ ಮಾಡಿದ್ದೀ. ಜನವರಿ 1980ರಲ್ಲಿ ಮದ್ರಾಸಿನಲ್ಲಿ ದೇವರ ರಾಜ್ಯದ ಬರೋಣಕ್ಕಾಗಿ ಪ್ರಾರ್ಥಿಸಲು ನಮ್ಮನ್ನು ಪ್ರೇರೇಪಿಸಿದ್ದೀ ಮತ್ತು 1982ರಲ್ಲಿ ವೆಲ್ಲೂರಿನಲ್ಲಿ – ನಿನ್ನ ಮಗನಾದ ಯೇಸುಕ್ರಿಸ್ತನು ಲೋಕಕ್ಕೆ ಜೀವವಾಗಿದ್ದಾನೆ ಎಂದು ಜ್ಞಾಪಕ ಮಾಡಿದ್ದೀ

**ಸಭೆ: ಹಲ್ಲೆಲೂ ಹಲ್ಲೆಲೂ ಹಲ್ಲೆಲೂ ಹಲ್ಲೆಲೂಯಾ, ಕೊಂಡಾಡಿರಿ (ಸ್ತುತಿಸಿರಿ)**

**ನಾಯಕ/ಕಿ:** ಜನವರಿ 1984ರಲ್ಲಿ ಸಿಕಂದ್ರಾಬಾದಿನಲ್ಲಿ – ಪವಿತ್ರಾತ್ಮನ ಅನ್ಯೋನ್ಯತೆಯಲ್ಲಿ ನೆಲೆಗೊಳ್ಳಲು ನಮ್ಮನ್ನು ಪ್ರೇರೇಪಿಸಿದ್ದೀ. ಜನವರಿ 1986ರಲ್ಲಿ ತ್ರಿವಾಡ್ರಂನಲ್ಲಿ – ನಾವು ಕ್ರಿಸ್ತನ ಮಾರ್ಗದಲ್ಲಿ ನಿಯೋಗವನ್ನು ಮಾಡಲು ಪ್ರೋತ್ಸಾಹ ಮಾಡಿದ್ದೀ. ಜನವರಿ 1988ರಲ್ಲಿ ಮಧುರೈನಲ್ಲಿ – ಲೋಕದಲ್ಲಿ ಸೇವೆ ಮಾಡುವದಕ್ಕೆ ದೇವಜನರನ್ನು ರೂಪಿಸಲು ಜ್ಞಾಪಕಪಡಿಸಿದ್ದೀ

**ಸಭೆ: ಹಲ್ಲೆಲೂ ಹಲ್ಲೆಲೂ ಹಲ್ಲೆಲೂ ಹಲ್ಲೆಲೂಯಾ, ಕೊಂಡಾಡಿರಿ (ಸ್ತುತಿಸಿರಿ)**

**ನಾಯಕ/ಕಿ:** ಜನವರಿ 1990ರಲ್ಲಿ ಧಾರವಾಡದಲ್ಲಿ – ಸಮಸ್ತ ಸೃಷ್ಟಿಯನ್ನು ನವೀಕರಿಸಲು, ಪಾವನಾತ್ಮನನ್ನು ಆಹ್ವಾನಿಸಲು ನಮಗೆ ಜ್ಞಾಪಕ ಮಾಡಿದ್ದೀ. ಜನವರಿ 1992ರಲ್ಲಿ ತಿರುನಲ್ವೇಲಿಯಲ್ಲಿ ಇಡೀ ಸೃಷ್ಟಿಗೆ ಸುವಾರ್ತೆಯನ್ನು ಸಾರಲು ನಮಗೆ ಪ್ರೋತ್ಸಾಹ ಮಾಡಿದ್ದೀ, ಜನವರಿ 1994ರಲ್ಲಿ ತಿರುಚಿರಪಳ್ಳಿಯಲ್ಲಿ – ಸಭೆಯನ್ನು ಮತ್ತು ಅದರ ನಿಯೋಗವನ್ನು ಸಾರ್ವಭೌಮ ಮತ್ತು ಬಹುತ್ವದ ಸಮಾಜವಾಗಿದೆ ಎಂದು ಯೋಚಿಸಲು ನಮ್ಮನ್ನು ಸಲಹಿದ್ದೀ

**ಸಭೆ: ಹಲ್ಲೆಲೂ ಹಲ್ಲೆಲೂ ಹಲ್ಲೆಲೂ ಹಲ್ಲೆಲೂಯಾ, ಕೊಂಡಾಡಿರಿ (ಸ್ತುತಿಸಿರಿ)**

**ನಾಯಕ/ಕಿ:** ಜನವರಿ 1996ರಲ್ಲಿ ಕೊಯಂಬತ್ತೂರಿನಲ್ಲಿ – ಸಭೆಯು ಒಟ್ಟಾಗಿ ಐಕ್ಯತೆಯಲ್ಲಿ ಬೆಳೆಯಲೂ ಹಂಚಿಕೊಳ್ಳಲೂ ಪ್ರಸ್ತುತ ಕಾಲಗಳಲ್ಲಿ ಸಮಯೋಚಿತವಾದದ್ದು ಎಂಬುದಾಗಿ ನಮಗೆ ಜ್ಞಾಪಕಪಡಿಸಿದ್ದೀ. ಜನವರಿ 1998ರಲ್ಲಿ ರಾಯಲಸೀಮಾದಲ್ಲಿ – ನಾವು ನಿನ್ನ ಕಡೆಗೆ ತಿರುಗಲು ಮತ್ತು ನಂಬಿಕೆಯಲ್ಲಿ ಸಂತೋಷಿಸಲು ಪ್ರೋತ್ಸಾಹ ನೀಡಿದ್ದೀ. 2000ರಲ್ಲಿ ಸಿಕಂದ್ರಾಬಾದನಲ್ಲಿ – ಕ್ರೂಜೆಯು ನಿರೀಕ್ಷೆ ಮುಂದುವರಿಕೆಯ ಸಂಕೇತವಾಗಿದೆ ಎಂದು ನಮಗೆ ಜ್ಞಾಪಕ ಮಾಡಿದ್ದೀ

**ಸಭೆ: ಹಲ್ಲೆಲೂ ಹಲ್ಲೆಲೂ ಹಲ್ಲೆಲೂ ಹಲ್ಲೆಲೂಯಾ, ಕೊಂಡಾಡಿರಿ (ಸ್ತುತಿಸಿರಿ)**

**ನಾಯಕ/ಕಿ:** ಜನವರಿ 2002ರಲ್ಲಿ ಮೆಲುಕಾವುಮಟ್ಟಂನಲ್ಲಿ – ನಾವು ಕರ್ತನನ್ನು ಹುಡುಕಿ, ನಿನ್ನ ಶಾಂತಿಯ ಸಾಧನಗಳಾಗಿ ರೂಪಿಸಲು ಮತ್ತು ಬದಲಾಗಲು ಪ್ರೇರೇಪಿಸಿದ್ದೀ. 2004ರಲ್ಲಿ ಬೆಂಗಳೂರಿನಲ್ಲಿ – ಜೀವನದ ಸಂಪೂರ್ಣತೆಯು ಎಲ್ಲರಿಗೂ ಕ್ರಿಸ್ತನಲ್ಲಿದೆ ಎಂದು ಜ್ಞಾಪಕ ಮಾಡಿದ್ದೀ ಮತ್ತು ಜನವರಿ 2006ರಲ್ಲಿ ಮೈಸೂರಿನಲ್ಲಿ – ನಮ್ಮ ದೇವರು ಲೋಕವನ್ನು ರೂಪಾಂತರಿಸಿದ್ದಾನೆ ಎಂಬ ಅನುಭವದ ಸ್ಫೂರ್ತಿಯು ನಮಗೆ ನೀಡಿದ್ದೀ

**ಸಭೆ: ಹಲ್ಲೆಲೂ ಹಲ್ಲೆಲೂ ಹಲ್ಲೆಲೂ ಹಲ್ಲೆಲೂಯಾ, ಕೊಂಡಾಡಿರಿ (ಸ್ತುತಿಸಿರಿ)**

**ನಾಯಕ/ಕಿ:** ಜನವರಿ 2008ರಲ್ಲಿ ವಿಶಾಕಪಟ್ಟಣದಲ್ಲಿ – ನಾವು ಕ್ರಿಸ್ತನಲ್ಲಿ ಸಂತೋಷಿಸಲು ಮತ್ತು ನಂಬಿಕೆಯ ಸಮುದಾಯಗಳನ್ನು ಕಟ್ಟಲು ನಮ್ಮನ್ನು ಕರೆದಿದ್ದೀ. ಜನವರಿ 2010ರಲ್ಲಿ ಕೋರ್ಟಾಲಂನಲ್ಲಿ – ಯೇಸುಕ್ರಿಸನು ಸಂಧಾನಪಡಿಸುವವನೆಂದು ನಮಗೆ ಜ್ಞಾಪಕಮಾಡಿದ್ದೀ ಮತ್ತು ಜನವರಿ 2012ರಲ್ಲಿ ಕನ್ಯಾಕುಮಾರಿಯಲ್ಲಿ – ನಿನ್ನ ಲೋಕದಲ್ಲಿ ನಾವು ಐಕ್ಯತೆಯಿಂದಿರಲು ಕರೆ ನೀಡಿದ್ದೀ. ಮತ್ತು ಜನವರಿ 2014ರಲ್ಲಿ ವಿಜಯವಾಡದಲ್ಲಿ – ಶಾಂತಿಯನ್ನು ಒದಗಿಸುವ ನ್ಯಾಯದ ದೇವರನ್ನು ದೃಷ್ಟಿಸಲು ಪ್ರೇರಣೆ ನೀಡಿದ್ದೀ. 2017ರಲ್ಲಿ ಕೋಟಯಂನಲ್ಲಿ – ನಾವು ಪರಿಮಿತಿರಹಿತ ಸಭೆಯೂ ಕ್ರಿಸ್ತನ ಸಮುದಾಯಗಳಾಗುವಂತೆ ರೂಪುಗೊಳ್ಳಲು ಪ್ರಮಾಣ ಮಾಡುವಂತೆ ಪ್ರೇರಿಸಿದ್ದೀ

**ಸಭೆ: ಹಲ್ಲೆಲೂ ಹಲ್ಲೆಲೂ ಹಲ್ಲೆಲೂ ಹಲ್ಲೆಲೂಯಾ, ಕೊಂಡಾಡಿರಿ (ಸ್ತುತಿಸಿರಿ)**

**ಕೊಂಡಾಡಿರಿ ಹಲ್ಲೆಲೂಯಾ, ಕೊಂಡಾಡಿರಿ ಹಲ್ಲೆಲೂಯಾ, ಕೊಂಡಾಡಿರಿ ಹಲ್ಲೆಲೂಯಾ ಕೊಂಡಾಡಿರಿ.**

**ಎಲ್ಲರೂ: ಈವರೆಗಿನ ನಿನ್ನ ನಂಬಿಗಸ್ತಿಕೆಗಾಗಿ ನಾವು ಅಭಾರಿಗಳಾಗಿದ್ದೇವೆ. ಬದಲಾಗದ ನಿನ್ನ ನಂಬಿಗಸ್ತಿಕೆಯ ಮೇಲೆ ಈಗಲೂ ಭವಿಷ್ಯತ್ತಿನಲ್ಲಿಯೂ ಭರವಸೆಯನ್ನು ಇರಿಸಿದ್ದೇವೆ. ನಮ್ಮ ದಕ್ಷಿಣ ಭಾರತ ಸಭೆಯನ್ನು ಆಶೀರ್ವದಿಸು. ನಿನ್ನ ವಾಕ್ಯವನ್ನು ಪ್ರಾಮಾಣಿಕರಾಗಿ ಕೇಳಲು ನಮ್ಮ ಕಿವಿಗಳನ್ನು ತೆರೆ; ನಿನ್ನ ಸ್ವರೂಪವನ್ನು ನಾವು ಪರಸ್ಪರರಲ್ಲಿ ನೋಡಲು ನಮ್ಮ ಕಣ್ಣುಗಳನ್ನು ತೆರೆ; ನಂಬಿಗಸ್ತಿಕೆಯಿಂದ ಕ್ಷಮೆಯನ್ನು ಯಾಚಿಸಲು ಸಂಧಾನಕ್ಕಾಗಿ ಕಾರ್ಯ ಕಾರ್ಯತತ್ಪರರಾಗಲು ನಮ್ಮ ಹೃದಯಗಳನ್ನು ತೆರೆ. ಆಮೆನ್.**

**ಪಶ್ಚಾತ್ತಾಪದ ಪ್ರಾರ್ಥನೆ**

**ನಾಯಕ/ಕಿ:** ಪ್ರೀತಿಯ ಸಹೋದರ ಸಹೋದರಿಯರೇ, ಕೆಲವು ಬಾರಿ ದೇವರು ಇದ್ದಾನೆ ಎಂಬುದನ್ನು ನಾವು ಮರೆತು, ದೇವರು ಇಲ್ಲವೇನೋ ಎಂಬಂತೆ ನಮ್ಮ ಜೀವಿತಗಳನ್ನು ಮುಂದುವರಿಸುತ್ತಿದ್ದೇವೆ. ದೇವರ ನಿಯೋಗಕ್ಕೆ ಯೋಗ್ಯ ಸಾಕ್ಷಿಗಳಾಗಿರುವಲ್ಲಿ ಸೋತುಹೋಗಿದ್ದೇವೆ. ದೇವರು ನಮ್ಮಿಂದ ಅಪೇಕ್ಷಿಸುವುದನ್ನು ಕೇಳಿರಿ:

**ನಾಯಕ/ಕಿ:** "ನಿಮ್ಮ ಹಮ್ಮಿಣಿಗಳಲ್ಲಿ ಹೊನ್ನು ಹಣ ದುಡ್ಡುಗಳನ್ನೂ ದಾರಿಗೆ ಹಸಿಬೆಯನ್ನೂ ಎರಡು ಅಂಗಿ ಕೆರ ಕೋಲು ಮೊದಲಾದವುಗಳನ್ನು ಸೌರಿಸಿಕೊಳ್ಳಬೇಡಿರಿ".

**ಸಭೆ:. ನಿನ್ನ ಸಾಕ್ಷಿಗಳಾಗಿರಲು ನಮಗೆ ಕರೆ ನೀಡಿದ್ದೀ. ಆದರೆ ನಾವು ಕೇವಲ ನಮ್ಮ ಅಗತ್ಯತೆಗಳ ಬಗ್ಗೆ ಮಾತ್ರ ಹೆಚ್ಚಾಗಿ ಯೋಚಿಸಿದ್ದೇವೆ ಮತ್ತು ನಿನ್ನ ನಿಯೋಗದ ಅಗತ್ಯತೆಗಳನ್ನು ಪ್ರಾಧಾನ್ಯಗೊಳಿಸಲಿಲ್ಲ. ಓ ದೇವರೇ ನಮ್ಮನ್ನು ಕ್ಷಮಿಸು.**

**ನಾಯಕ/ಕಿ:** "ಎರಡು ಅಂಗಿಗಳುಳ್ಳವನು ಇಲ್ಲದವನಿಗೆ ಒಂದು ಕೊಡಲಿ; ಆಹಾರವುಳ್ಳವನು ಇಲ್ಲದವನಿಗೆ ಕೊಡಲಿ" ಹಾಗಿದ್ದರೆ ಹಸಿದವರಿಗೆ ಊಟವನ್ನು, ಅಲೆದಾಡುವ ಬಡವರಿಗೆ ಆಶ್ರಯವನ್ನು ಬೆತ್ತಲೆಯಾಗಿರುವವರಿಗೆ ಹೊದಿಕೆಯನ್ನು ಕೊಡಬೇಕಲ್ಲವೇ?

**ಸಭೆ: ದೇವರೇ, ನಿನ್ನ ಸಾಕ್ಷಿಗಳಾಗಿರಲು ನಮಗೆ ಕರೆ ನೀಡಿದ್ದೀ ಆದರೆ ನಾವು ಕೇವಲ ಪ್ರೇಕ್ಷಕರಾಗಿ ಪ್ರಯಾಣದಲ್ಲಿ ನಮ್ಮ ಸಹ ಗತಿಹೀನರಿಗೆ ಪ್ರತಿಸ್ಪಂದಿಸಲು ಮತಿಹೀನರಾಗಿದ್ದೇವೆ. ನಾವು ಬರೀ ನೋಡುವವರಾಗಿದ್ದೇವೆ ಆದರೆ ದೃಷ್ಟಿಹೊಂದದವರಾಗಿದ್ದೇವೆ, ನಾವು ಬರೀ ಕೇಳಿಸಿಕೊಳ್ಳುತ್ತೇವೆ ಆದರೆ ಗಮನಿಸುವುದಿಲ್ಲ. ನಾವು ಮಾತಾಡುತ್ತೇವಾದರೂ ಸ್ವರವಿಲ್ಲದವರಾಗಿದ್ದೇವೆ. ಓ ದೇವರೇ ನಮ್ಮನ್ನು ಕ್ಷಮಿಸು.**

**ನಾಯಕ/ಕಿ:** "ಹಾಗಾದರೆ ಅಪೊಲ್ಲೋಸನು ಏನು? ಪೌಲನು ಏನು? ಅವರು ಸೇವಕರು; ಅವರ ಮುಖಾಂತರ ನೀವು ಕ್ರಿಸ್ತನನ್ನು ನಂಬುವವರಾದಿರಿ; ಕರ್ತನು ಒಬ್ಬೊಬ್ಬನಿಗೆ ದಯಪಾಲಿಸಿದ ಪ್ರಕಾರ ಅವರು ಸೇವೆಮಾಡುವವರಾಗಿದ್ದಾರೆ. ನಾನು ನೆಟ್ಟೆನು, ಅಪಲ್ಲೋಸನು ನೀರು ಹೊಯಿದನು ಆದರೆ ಬೆಳೆಸುತ್ತಾ ಬಂದವನು ದೇವರು".

**ಸಭೆ: ದೇವರೇ, ನಿನ್ನ ಸಾಕ್ಷಿಗಳಾಗಿರಲು ನಮಗೆ ಕರೆಯನ್ನು ನೀಡಿದ್ದೀ, ಆದರೆ ಸಾಮಾಜಿಕ ಸಾಂಸ್ಕೃತಿಕ ಅಡೆತಡೆಗಳಿಂದ ವಿಭಾಗಿಸಲ್ಪಟ್ಟಿದ್ದೇವೆ, ಜಾತಿ ಮತ್ತು ವರ್ಗಗಳ ಆಧಾರದಲ್ಲಿ ಮುರಿಲ್ಪಟ್ಟಿದ್ದೇವೆ, ನಮ್ಮಲ್ಲಿ ಪ್ರತಿಯೊಬ್ಬರು ನಿನ್ನ ಕೃಪೆಯ ನಿಮಿತ್ತ ವಿಭಿನ್ನ ವರಗಳನ್ನು ಹೊಂದಿದ್ದೇವೆ ಮತ್ತು ಪರಸ್ಪರರ ಸೇವೆಯನ್ನು ಮತ್ತು ನಿಯೋಗವನ್ನು ಮಾತ್ರವೇ ಕಟ್ಟುವದಕ್ಕಾಗಿ ವಿನಿಯೋಗಿಸಿಕೊಳ್ಳಬೇಕೆಂದು ಮನವರಿಕೆಮಾಡಿಕೊಳ್ಳಲು ವಿಫಲರಾಗಿದ್ದೇವೆ, ಓ ಕರ್ತನೇ ನಮ್ಮನ್ನು ಆವರಿಸಿದ ಜನಲೋಕವು ನಿನ್ನ ಪ್ರೀತಿಯನ್ನು ತಿಳಿಯುವ ಅಗತ್ಯತೆಯಲ್ಲಿದ್ದಾರೆ, ಅವರು ಕತ್ತಲೆಯಲ್ಲಿರುವಾಗ ಪ್ರಕಾಶಿಸಲು ಬೆಳಕು ಅಗತ್ಯವಾಗಿದೆ, ನಿನ್ನ ಪ್ರೀತಿ ಮತ್ತು ಕರುಣೆಯ ನಿಮಿತ್ತ ಅವರ ಬಳಿ ಸಾಗು. ನಮ್ಮಲ್ಲಿರುವ ವಾಕ್ಯವನ್ನು ಅವರಿಗೆ ನೀಡುತ್ತೇವೆ; ಖಚಿತ ಮತ್ತು ನಿರ್ಧಿಷ್ಟ ನಿರೀಕ್ಷೆಯನ್ನು ಅವರೊಂದಿಗೆ ಹಂಚಿಕೊಳ್ಳುತ್ತೇವೆ. ಕರ್ತನೇ ಅನ್ಯಾಯದ ಪರಿಸ್ಥಿತಿಯಲ್ಲಿ ನಮ್ಮ ಮೌನವನ್ನು ಕ್ಷಮಿಸು, ನಮ್ಮ ನೆರೆಯವರು ನರಳುವ ಸ್ಥಿತಿಯಲ್ಲಿದ್ದಾಗಲೂ ನಾವು ಮೌನವಾಗಿದ್ದುದರಿಂದ ನಮ್ಮ ಮೌನವನ್ನು ಕ್ಷಮಿಸು, ನಿರೀಕ್ಷೆಯೊಳಗೆ ನಮ್ಮಲ್ಲಿ ಸೇರಿಸಿಕೊಂಡು ಹಂಚಿಕೊಳ್ಳಲಿಲ್ಲವಾದ್ದರಿಂದ ನಮ್ಮನ್ನು ಕ್ಷಮಿಸು; ಹಲವು ವೇಳೆ ಬೇಕಾದವರಿಗಾಗಿಯೂ ಇನ್ನೂ ಕೆಲವು ಬಾರಿ ಬೇಜವಾಬ್ದಾರಿಕೆಯಿಂದಲೂ ತೋರಿದ ಪ್ರೀತಿಯ ಪರಿಮಿತೆಗಾಗಿ ನಮ್ಮನ್ನು ಕ್ಷಮಿಸು. ಕರ್ತನೇ ನಮ್ಮ ಯಾತ್ರಾ ಗುರಿಯನ್ನು ಇನ್ನೂ ತಲುಪಿಲ್ಲ ಕ್ಷಮೆಯ ಮತ್ತು ಸಂಧಾನದ ಯಾತ್ರೆಯು ಇನ್ನೂ ಇರುವುದರಿಂದ ನಮ್ಮ ಯೋಗ್ಯತೆಯ ನಿಮಿತ್ತವಲ್ಲ ನಿನ್ನ ವಾಗ್ದಾನದ ಮೇರೆಗೆ ನಮ್ಮನ್ನು ಕ್ಷಮಿಸು.**

**ವಾಗ್ದಾನದ ವಚನ:**

ನೀನು ಹೋಗುವಾಗಲೂ ಬರುವಾಗಲೂ ಇಂದಿನಿಂದ ಸದಾಕಾಲವೂ ಯೆಹೋವನು ನಿನ್ನನ್ನು ಕಾಪಾಡುವನು. ಕೀರ್ತನೆ 121:8

ಈಗ ನೀನು ನನ್ನ ಹೆಜ್ಜೆಗಳನ್ನು ಲೆಕ್ಕಿಸಿ, ನನ್ನ ಪಾಪದ ಮೇಲೆ ಕಾವಲಾಗಿದ್ದೀ! ಯೋಬ 14:16

ಬನ್ನಿರಿ ಯೆಹೋವನ ಪರ್ವತಕ್ಕೆ, ಯಾಕೋಬ್ಯರ ದೇವರ ಮಂದಿರಕ್ಕೆ, ಹೋಗೋಣ! ಆತನು ತನ್ನ ಮಾರ್ಗಗಳ ವಿಷಯವಾಗಿ ನಮಗೆ ಬೋಧನೆ ಮಾಡುವನು. ನಾವು ಆತನ ದಾರಿಗಳಲ್ಲಿ ನಡೆಯುವೆವು ಎಂದು ಹೇಳುವರು. ಯೆಶಾಯ 2:3

ದೇವರಿಗೆ ನಮ್ಮ ಪ್ರಯಾಣ ತಿಳಿದಿದೆ. ಆತನು ನಮ್ಮ ಮಾರ್ಗಗಳನ್ನು ಕಾಯುವನು, ಪಾಪಗಳ ಕಲೆಗಳಿಂದಲೂ ದುಷ್ಟ ಮಾರ್ಗಗಳ ಗುರುತುಗಳಿಂದ ನಮ್ಮ ಪಾದಗಳು ಸ್ಪರ್ಶವನ್ನು ಕಳೆದುಕೊಂಡಿವೆ. ಪಾಪದ ಕಲೆಗಳಿಂದಲೂ ಮತ್ತು ದುಮಾರ್ಗದ ಗುರುತುಗಳಿಂದಲೂ ತುಂಬಿದ ಬಳಲಿದ ಮತ್ತು ಕಲ್ಲಾದ ನಮ್ಮ ಪಾದಗಳನ್ನು ದೇವರು ತೊಳೆಯಲು ಸಿದ್ಧನಾಗಿದ್ದಾನೆ. ದೈವಿಕ ಪ್ರೀತಿಯನ್ನು ನಮ್ಮ ಹೃದಯದಲ್ಲಿ ಮತ್ತೆ ಬರೆಯುವನು. ನಮ್ಮ ಕಣ್ಣುಗಳು ಅದನ್ನು ಪ್ರತಿಬಿಂಬಿಸಲಿ. ನಮ್ಮ ಬಾಯಿ ಅದನ್ನು ಸಾರಲಿ ನಮ್ಮ ಜೀವಿತ ಅದನ್ನು ಪ್ರಚುರಪಡಿಸಲಿ, ನಮ್ಮ ಕರ್ತನೂ ನಮ್ಮ ಸ್ನೇಹಿತನೂ ಮತ್ತು ನಮ್ಮ ಜೀವವೂ ಆದ ಯೇಸುವಿನ ನಾಮದಲ್ಲಿ ಬೇಡುತ್ತೇವೆ. ಆಮೆನ್.

**ದೇವರ ವಾಕ್ಯದ ಸೇವೆ**

**ಹಳೇ ಒಡಂಬಡಿಕೆ ಪಾರಾಯಣ:** ಆದಿಕಾಂಡ 33:1–20

**ಸಂಗೀತ/ ಸಂಕೀರ್ತನೆ:**

**ಪತ್ರಿಕಾಭಾಗ:** 2 ಕೊರಿಂಥ 5:11–21

**ಕೀರ್ತನೆ:** 85

**ಸಂಗೀತ/ ಸಂಕೀರ್ತನೆ:**

**ಸುವಾರ್ತಾಭಾಗ :** ಯೋಹಾನ 8:1–11

**ಸತ್ಯವಾಕ್ಯ ಪ್ರಸಂಗ: "ಕ್ಷಮಾಪಣೆ ಮತ್ತು ಸಂಧಾನದ ಕಡೆಗಿನ ಯಾತ್ರಾ ಪಯಣ"**

**ಅಪೊಸ್ತಲಿಕ ವಿಶ್ವಾಸ ಪ್ರಮಾಣ**

ಪರಲೋಕ ಭೂಲೋಕಗಳನ್ನು ಸೃಷ್ಟಿಸಿದ ಸರ್ವಶಕ್ತನಾಗಿರುವ ತಂದೆಯಾದ ದೇವರನ್ನು ನಂಬುತ್ತೇನೆ.

ಆತನ ಏಕ ಕುಮಾರನಾಗಿರುವ ನಮ್ಮ ಪ್ರಭುವಾದ ಯೇಸು ಕ್ರಿಸ್ತನನ್ನು ನಂಬುತ್ತೇನೆ. ಈತನು ಪರಿಶುದ್ಧಾತ್ಮನಿಂದ ಕನ್ಯಾ ಮರಿಯಳ ಗರ್ಭದಲ್ಲಿ ಧರಿಸಲ್ಪಟ್ಟು ಆಕೆಯಲ್ಲಿ ಹುಟ್ಟಿ ಪೊಂತಿ ಪಿಲಾತನ ಆಧಿಪತ್ಯದಲ್ಲಿ ಶ್ರಮೆಹೊಂದಿ, ಶಿಲುಬೆಗೆ ಜಡಿಯಲ್ಪಟ್ಟು, ಸತ್ತು ಹೂಣಲ್ಪಟ್ಟು, ಪಾತಾಳಕ್ಕೆ ಇಳಿದು ಹೋಗಿ, ಮೂರನೇ ದಿನದಲ್ಲಿ ಸತ್ತವರೊಳಗಿಂದ ಎದ್ದು ಪರಲೋಕಕ್ಕೆ ಏರಿಹೋಗಿ, ಸರ್ವಶಕ್ತನಾಗಿರುವ ತಂದೆಯಾದ ದೇವರ ಬಲಪಾರ್ಶ್ವದಲ್ಲಿ ಕುಳಿತುಕೊಂಡಿರುತ್ತಾನೆ; ಈತನು ಅಲ್ಲಿಂದ ಬಂದು ಬದುಕಿರುವವರಿಗೂ ಸತ್ತವರಿಗೂ ನ್ಯಾಯ ತೀರಿಸುವನು ಎಂಬುದನ್ನು ನಂಬುತ್ತೇನೆ.

ನಾನು ಪರಿಶುದ್ಧಾತ್ಮನನ್ನು ನಂಬುತ್ತೇನೆ. ಒಂದೇ ಪರಿಶುದ್ಧ ಕ್ರೈಸ್ತ ಸಭೆಯೂ ಭಕ್ತರ ಅನ್ಯೋನ್ಯತೆಯೂ ಪಾಪದ ಪರಿಹಾರವೂ ದೇಹದ ಪುನರುತ್ಥಾನವೂ ನಿತ್ಯಜೀವವೂ ಉಂಟೆಂಬುದನ್ನು ನಂಬುತ್ತೇನೆ. ಆಮೆನ್.

**ಸಭಾಪ್ರಕಟಣೆ:**

**ಕಾಣಿಕೆ ಸಂಗೀತ:**

**ಕಾಣಿಕೆ ಪ್ರಾರ್ಥನೆ:**

**ಪರಾರ್ಥ ಪ್ರಾರ್ಥನೆ:**

**ನಾಯಕ/ಕಿ:** ದಕ್ಷಿಣ ಭಾರತ ಸಭೆಯು ತನ್ನ ಯಾತ್ರಾ ಪಯಣದಲ್ಲಿ 70 ವರುಷಗಳ ಐಕ್ಯ ಮತ್ತು ಸಾಕ್ಷಿಯ ಜೀವನವನ್ನು ಈ ದೇಶದಲ್ಲಿ ಆಚರಿಸುತ್ತಿದೆ. ನಾವು 70 ವರುಷಗಳ ಸ್ವತಂತ್ರ ಭಾರತಕ್ಕಾಗಿ ಹಾಗೂ ರಾಷ್ಟ್ರ ನಿರ್ಮಾಣದ ಕಡೆಗೆ ಸಭೆಯು ನೀಡಿರುವ ಕೊಡುಗೆಯನ್ನು ಸ್ಮರಿಸಿ ವಂದಿಸುತ್ತೇವೆ. ನಮ್ಮ ಕರ್ತಾ, ನಮ್ಮ ದೇಶದ ರಾಷ್ಟ್ರಾಧ್ಯಕ್ಷ, ಪ್ರಧಾನ ಮಂತ್ರಿ, ರಾಜ್ಯಪಾಲರು ಮತ್ತು ಮುಖ್ಯಮಂತ್ರಿಗಳು ಹಾಗೂ ಅಧಿಕಾರದಲ್ಲಿರುವ ಎಲ್ಲಾ ಆಡಳಿತಾಧಿಕಾರಿಗಳಿಗಾಗಿ ಪ್ರಾರ್ಥಿಸುತ್ತೇವೆ. ಶಾಂತಿ ಮತ್ತು ಈ ವಿಶ್ವದ ಭವಿಷ್ಯತ್ತಿನ ಮೇಲೆ ಪರಿಣಾಮ ಬೀರುವ ನಿರ್ಣಯಗಳನ್ನು ತೆಗೆದುಕೊಳ್ಳುವಂತೆ ಅವರನ್ನು ನಿನ್ನ ಜ್ಞಾನ ಮತ್ತು ಧೈರ್ಯಗಳಿಂದ ತುಂಬಿಸು. ನಮ್ಮ ರಾಷ್ಟ್ರವನ್ನು ಆಶೀರ್ವದಿಸಿ ದೇಶದಲ್ಲಿ ಸ್ವಾತಂತ್ರ್ಯ ಮತ್ತು ನ್ಯಾಯದ ಆಲೋಚನೆಗಳನ್ನು ಸಾಕಾರಗೊಳಿಸು. ನಿನ್ನ ರಾಜ್ಯದ ನಿರ್ಮಾಣ ಕಾರ್ಯದಲ್ಲಿ ಜ್ಯಾತ್ಯಾತೀತ ಮತ್ತು ಪ್ರಜಾಪತ್ರಭುತ್ವದ ಮೌಲ್ಯಗಳಿಂದ ಕೂಡಿದ ಸಮಾನತೆಯ ಸಮಾಜವನ್ನು ನಿರ್ಮಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವವರ ಜೊತೆ ನೀನು ಪಯಣಿಸು.

**ನಮ್ಮ ಮಧ್ಯೆ ವಾಸಿಸು ಮತ್ತು ಜವಾಬ್ದಾರಿಯುತ ನಾಗರಿಕರಾಗುವ ಯಾತ್ರಾ ಪಯಣದೆಡೆಗೆ ನಿದರ್ಶಿಸು.**

**ನಾಯಕ/ಕಿ:** ನಮ್ಮ ಯಾತ್ರಾ ಪಯಣದಲ್ಲಿ, ನಾವು ನಮ್ಮ ಮಧ್ಯೆ ಇರುವ ಮಕ್ಕಳ ಕೊಡುಗೆಯನ್ನು ಸ್ಮರಿಸಿ ವಂದಿಸುತ್ತೇವೆ. ದೇವಾ, ನೀನು ಮಕ್ಕಳನ್ನು ದೇವರ ರಾಜ್ಯದ ಪ್ರಜೆಗಳನ್ನಾಗಿ ನಿರ್ಮಿಸಿದೆ ಮತ್ತು ಮಕ್ಕಳಂತೆ ಆಗದೆ ಹೋದರೆ ಒಬ್ಬರು ದೇವರ ರಾಜ್ಯದಲ್ಲಿ ಸೇರಲಾರರು ಎಂದು ಹೇಳಿದೆ. ಈ ಸಮಯದಲ್ಲಿ, ಯಾವಾಗಲೂ ಅಪಾಯದಂಚಿನಲ್ಲಿರುವ, ಶೋಷಣೆಗೊಳಗಾದ, ಹಕ್ಕುಗಳು ನಿರಾಕರಿಸಲ್ಪಟ್ಟು ಬಲವಂತವಾಗಿ ಕೆಲಸಕ್ಕೆ ನೂಕಲ್ಪಟ್ಟ ಮಕ್ಕಳನ್ನು ನೆನಪಿಸುತ್ತೇವೆ. ವಿವಿಧ ಸಾಮರ್ಥ್ಯವುಳ್ಳ ಮತ್ತು ಕುಟುಂಬ, ಶಾಲೆ, ಸಭೆ ಮತ್ತು ವಿಶಾಲ ಸಮುದಾಯದ ಸ್ಥಳಾವಕಾಶವನ್ನು ಯಾವಾಗಲೂ ಹಂಬಲಿಸುವ ಮಕ್ಕಳನ್ನು ಜ್ಞಾಪಿಸುತ್ತೇವೆ. ಓ ಕರ್ತಾ, ಅವರ ಮೂಲಕ ನಿನ್ನಾಳ್ವಿಕೆಯನ್ನು ಸಾಕಾರಗೊಳಿಸಲು ಮತ್ತು ಗೌರವ ಹಾಗೂ ಘನತೆಯಿಂದ ಕೂಡಿರುವ ಮೌಲ್ಯಗಳ ತಳಹದಿಯಲ್ಲಿ ರೂಪಿಸಲ್ಪಟ್ಟ ಹಿಂಸಾಮುಕ್ತ ಸುರಕ್ಷಿತ ಹಾಗೂ ಸ್ನೇಹಭಾವದ ಸಮಾಜವನ್ನು ನಿರ್ಮಿಸಲು ಸಹಾಯ ಮಾಡು. ಮಕ್ಕಳಲ್ಲಿ ನೀನಿಟ್ಟಿರುವ ಸಾಮರ್ಥ್ಯವನ್ನು ನಾವು ತಿಳಿದುಕೊಳ್ಳಲು ಸಮರ್ಥರನ್ನಾಗಿಸು.

**ನಮ್ಮ ಮಧ್ಯೆ ವಾಸಿಸು ಮತ್ತು ಮಕ್ಕಳಕೇಂದ್ರಿತ ಸಮುದಾಯಗಳ ಯಾತ್ರಾ ಪಯಣದೆಡೆಗೆ ನಿದರ್ಶಿಸು**

**ನಾಯಕ/ಕಿ:** ಯಾವುದು ತೆರೆದಿರಬೇಕಾಗಿತ್ತೋ ಮುಚ್ಚಲ್ಪಟ್ಟು, ಅಪಮಾನಕ್ಕೀಡಾದ, ಕಿರುಕುಳಕ್ಕೊಳಗಾದ, ಕಳಂಕಕ್ಕೀಡಾದ ಮತ್ತು ಕುಟುಂಬಗಳಲ್ಲಿ ವ್ಯಕ್ತಪಡಿಸಲಾದ ದೌರ್ಜನ್ಯಕ್ಕೊಳಗಾದ ಮತ್ತು ನಿರ್ಬಂಧಕ್ಕೊಳಗಾದ, ದುರ್ಬಳಕೆಯಾದ ಮಹಿಳೆಯರನ್ನು ನಾವು ನೆನಪಿಸುತ್ತೇವೆ; ನಮ್ಮ ಮೌನ ಮತ್ತು ಮರೆಮಾಚುವಿಕೆಗಳನ್ನು ದಯವಿಟ್ಟು ಕ್ಷಮಿಸು. ರೂಪಾಂತರಿಸುವ ದೇವಾ, ಇತರರಿಂದ ಪ್ರತ್ಯೇಕಿಸಲ್ಪಟ್ಟ ಸ್ಥಿತಿಯಲ್ಲಿದ್ದ ಸಮಾರ್ಯದ ಸ್ತ್ರೀಯನ್ನು ನಿನ್ನ ಸುವಾರ್ತೆಯನ್ನು ಸಾರುವ ಸಾಧನವನ್ನಾಗಿ ಮಾರ್ಪಡಿಸಿದಾತ ನೀನು. ನ್ಯಾಯ ಮತ್ತು ಸಮಾನತೆಯ ಸಮಾಜದ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡ ನಿನ್ನ ಜನರ ಮನಸ್ಸು ಮತ್ತು ಹೃದಯಗಳನ್ನು ರೂಪಾಂತರಿಸೆಂದು ಬೇಡುತ್ತೇವೆ. ಸ್ತ್ರೀಯು ಭಯವಿಲ್ಲದೆ ಮುಕ್ತವಾಗಿ ನಡೆಯುವಂತಾಗಲಿ. ಮಹಿಳೆಯರೂ ಪುರುಷರೂ ಈ ಭುವಿಯಲ್ಲಿ ನಿನ್ನ ರಾಜ್ಯವನ್ನು ಸ್ವಾಗತಿಸುವ, ಆಲಂಗಿಸುವ ಮತ್ತು ದೇವಜನರ ಸಮುದಾಯವನ್ನು ಜೊತೆಗೂಡಿ ಹೆಣೆಯುವ ನಿಯೋಗಿಕ ಯಾತ್ರಾ ಪಯಣದಲ್ಲಿ ಸಹಭಾಗಿಗಳಾಗಿರಲಿ.

**ನಮ್ಮ ಮಧ್ಯೆ ವಾಸಿಸು ಮತ್ತು ಲಿಂಗ ಸಮಾನತೆಯ ಸಮಾಜದ ಸಾಕಾರದ ಯಾತ್ರಾ ಪಯಣದೆಡೆಗೆ ನಿದರ್ಶಿಸು**

**ನಾಯಕ/ಕಿ:** ಕೃಪಾಳು ದೇವಾ, ನಿನ್ನ ಕೃಪೆ ಮತ್ತು ಜ್ಞಾನದ ಪ್ರತೀಕವೆಂಬಂತೆ ನಮ್ಮ ಮಧ್ಯೆ ಇರಿಸಿರುವ ಹಿರಿಯರಿಗಾಗಿ ಪ್ರಾರ್ಥಿಸುತ್ತೇವೆ. ಅವರ ಅಶಕ್ತತೆಯನ್ನು ಹಾಗೂ ಅಪ್ಪುಗೆ, ಪ್ರೀತಿ ಮತ್ತು ಆರೈಕೆಯನ್ನು ಇಚ್ಛಿಸುವ ಅವರ ಬೇಡಿಕೆಗಳನ್ನು ನೆನಪಿಸುತ್ತೇವೆ. ನಿರ್ಲಕ್ಷಿತರಾದ ಮತ್ತು ನಿರಾಕರಿಸಲ್ಪಟ್ಟ, ಬೀದಿಗಳಲ್ಲಿ ನರಳಾಡಿ ಸಾಯುವ ಸ್ಥಿತಿಗೆ ತಳ್ಳಲ್ಪಟ್ಟ ಮತ್ತು ತಮ್ಮ ಜೀವಾಂತ್ಯದ ರೋಗಗಳಿಗೆ ತುತ್ತಾದ ವೃದ್ಧರನ್ನು ಜ್ಞಾಪಿಸುತ್ತೇವೆ. ಅವರನ್ನು ಪಾಲನೆಮಾಡಲು ಮುಂದಾಗುವವರೂ ಅದನ್ನು ಕಷ್ಟವೆಂದು ಭಾವಿಸುವ ಪರಿಸ್ಥಿತಿಯಲ್ಲಿ, ನಿನ್ನ ಕೃಪೆಯೇ ಸಾಕು ಎಂದರಿಯುವ ದಯ ನೀಡು. ದೇವಾ ನೀನಾದರೋ ಜಲಪ್ರಳಯದಿಂದ ಸಕಲ ಮನುಕುಲವನ್ನು ಸಂರಕ್ಷಿಸುವದಕ್ಕಾಗಿ ನಾವೆ ಕಟ್ಟಲು ವಯೋವೃದ್ಧನ ಮೇಲೆ ಭರವಸವಿಟ್ಟೆ. ಅಬ್ರಹಾಮ ಮತ್ತು ಸಾರಳಿಗೆ ಅವರ ಇಳಿವಯಸ್ಸಿನಲ್ಲಿಯೂ ಮಗುವನ್ನು ಅನುಗ್ರಹಿಸಿ ಆ ಮಗುವು ಇಸ್ರಾಯೇಲಿನ ಆರಂಭಕ್ಕೆ

ಮುನ್ನುಡಿಬರೆದೆ. ವಾಗ್ದತ್ತ ದೇಶದ ಕಡೆಗೆ ಸಾವಿರಾರು ಜನರನ್ನು ಅರಣ್ಯದಲ್ಲಿ ಮುನ್ನಡೆಸಲು ವಯಸ್ಸಾಗುತ್ತಿದ್ದ ಮೋಶೆಯನ್ನು ನೀನು ಮಾರ್ಗದರ್ಶಿಸಿದೆ. ನಮ್ಮ ಮಣ್ಣಾದ ಪಾದಗಳನ್ನು ಶುಚಿಗೊಳಿಸಿದ ಹಸ್ತಗಳು ಇವೇ ಮತ್ತು ನಮಗೆ ಜೀವನವನ್ನು ನೀಡಲು ಹಲವಾರು ಮೈಲಿ ನಡೆದ ಕಾಲುಗಳು ಇವೇ ಎಂಬುದನ್ನು ಅರಿತುಕೊಳ್ಳಲು ನಮಗೆ ಸಹಾಯ ಮಾಡು. ನಿನ್ನಂತೆ ನಾವೂ ಹಿರಿಯರನ್ನು ಪ್ರೀತಿಸಿ, ಆಶ್ರಯಿಸಿ, ಗೌರವಿಸಲು ಸಹಾಯನೀಡು. ನಮ್ಮ ಸುತ್ತಲೂ ಏಕಾಂಗಿಗಳಾಗಿಯೂ ಭಯಗ್ರಸ್ಥರಾಗಿಯೂ ಇರುವ ವೃದ್ಧರನ್ನು ನೋಡುವಂತೆ ನಮ್ಮ ಕಣ್ಣುಗಳನ್ನು ತೆರೆ ಮತ್ತು ಅವರ ಕಥೆಗಳನ್ನು ಕೇಳಲು ಸಮಯವನ್ನು ಅನುಗ್ರಹಿಸು. ನಮ್ಮ ಸ್ವಂತ ಮನೆ ಮತ್ತು ಕುಟುಂಬಗಳಿಗೆ ಅವರನ್ನು ಕರೆತರಲು ಮತ್ತು ಆರೈಕೆ ಮಾಡಲು ನಮಗೆ ಅನುಕಂಪವನ್ನು ನೀಡು.

**ನಮ್ಮ ಮಧ್ಯೆ ವಾಸಿಸು ಮತ್ತು ಹಿರಿಯರ ಸಾಮರ್ಥ್ಯ ಮತ್ತು ಜ್ಞಾನವನ್ನು ಗುರುತಿಸಲು ಯಾತ್ರಾ ಪಯಣದೆಡೆಗೆ ನಿದರ್ಶಿಸು**

**ನಾಯಕ/ಕಿ:** ಪ್ರೀತಿಸ್ವರೂಪನಾದ ದೇವಾ, ನಮ್ಮ ಕರ್ತನಾದ ಯೇಸುವನ್ನು ತಮ್ಮ ಸ್ವಂತ ರಕ್ಷಕನೆಂದು ನಂಬಿದ ಎಲ್ಲಾ ಯುವಜನರಿಗಾಗಿ ನಿನ್ನನ್ನು ವಂದಿಸುತ್ತೇವೆ. ಅವರು ವಿಶ್ವಾಸದಲ್ಲಿ ಬೆಳೆದು ನಿನ್ನ ಕೃಪಾ ಸುವಾರ್ತೆಯ ಸತ್ಯದಲ್ಲಿ ನೆಲೆಗೊಳ್ಳುವದು ಅತ್ಯವಶ್ಯವೆಂಬುದನ್ನು ಗುರುತಿಸುತ್ತೇವೆ. ದೇವಾ ನಿನ್ನ ಭಯವೇ ಜ್ಞಾನಕ್ಕೆ ಮೂಲವು; ಎಂದರಿತ ಯುವಜನರಿಗೆ ನಿನ್ನ ಭಯಭಕ್ತಿಯಲ್ಲಿ ವೃದ್ಧಿಸುವಂತೆಯೂ ನಿನ್ನ ದೀನತೆಯನ್ನು ತೋರುವಂತೆಯೂ ಯುವಜನರು ಆತ್ಮದಿಂದಲೂ ಸತ್ಯದಿಂದಲೂ ನಡೆಯುವಂತೆಯೂ ಅನುಗ್ರಹಿಸು. ಯುವಜನರು ನಿನ್ನ ಕೃಪೆಯಲ್ಲಿ ಬೆಳೆಯಲಿ ಮತ್ತು ನಿನ್ನ ಸುವಾರ್ತೆಗೆ ಹೆಚ್ಚೆಚ್ಚು ಬದ್ಧರಾಗಿರಲಿ. ಅವರ ಧೈರ್ಯ ವೃದ್ಧಿಸಲಿ ಮತ್ತು ನಿನ್ನ ರಾಜ್ಯದ ಸತ್ಯಕ್ಕಾಗಿ ನಿಲ್ಲಲಿ. ಮುಗ್ಗರಿಸುವಂತೆ ಕಾರಣವಾಗುವ ಎಲ್ಲವುಗಳಿಂದಲೂ ಅವರನ್ನು ಸಂರಕ್ಷಿಸು ಮತ್ತು ನಿನ್ನ ಸತ್ಯದಿಂದ ಅವರನ್ನು ಮಾರ್ಗದರ್ಶಿಸು. ನಿನ್ನ ವಿವೇಚನಾತ್ಮವನ್ನು ಅನುಗ್ರಹಿಸಿ ಯೇಸುವಿನ ಮಾದರಿಯನ್ನು ಅನುಸರಿಸಿ ಅವರೂ ಸಮುದಾಯದಲ್ಲಿ ಸೇವೆಸಲ್ಲಿಸಲು ಸನ್ನದ್ಧರನ್ನಾಗಿಸು.

**ನಮ್ಮ ಮಧ್ಯೆ ವಾಸಿಸು ಮತ್ತು ಕ್ರಿಸ್ತನ ಬದ್ಧಶಿಷ್ಯರಾಗುವ ಯಾತ್ರಾ ಪಯಣದೆಡೆಗೆ ನಿದರ್ಶಿಸು**

**ನಾಯಕ/ಕಿ:** ಪ್ರೀತಿಯ ದೇವಾ, ನಮ್ಮ ಯಾತ್ರಾ ಪಯಣದಲ್ಲಿ, ಮಾರ್ಥೋಮಾ ಸಭೆ, ಉತ್ತರ ಭಾರತ ಸಭೆ, ಅದರ ಎಲ್ಲಾ ಪದಾಧಿಕಾರಿಗಳು, ಬಿಷೋಪರು, ಸೇವಾವರ್ಗ ಮತ್ತು ಸದಸ್ಯರನ್ನೂ, ವರ್ಲ್ಡ್ ಕೌನ್ಸಿಲ್ ಆಫ್ ಚರ್ಚಸ್, ವರ್ಲ್ಡ್ ಕಮ್ಯುನಿಯನ್ ಆಫ್ ರಿಫಾರ್ಮ್ಡ್ ಚರ್ಚಸ್, ಕ್ರಿಶ್ಚಿಯನ್ ಕಾನ್‌ಫರೆನ್ಸ್ ಆಫ್ ಏಷ್ಯಾ, ಕಮ್ಯೂನಿಯನ್ ಚರ್ಚಸ್ ಆಫ್ ಇಂಡಿಯಾ, ನ್ಯಾಶನಲ್ ಕೌನ್ಸಿಲ್ ಆಫ್ ಚರ್ಚಸ್ ಇನ್ ಇಂಡಿಯಾ ಮತ್ತು ಐಕ್ಯತೆಗೆ ಪ್ರಯತ್ನಿಸುತ್ತಿರುವ ಎಲ್ಲಾ ನಂಬಿಕೆಯ ಜನರನ್ನು ನೆನಪಿಸಿಕೊಳ್ಳುತ್ತೇವೆ. ನಾವು ವಿಶೇಷವಾಗಿ ದಕ್ಷಿಣ ಭಾರತ ಸಭೆಗಾಗಿ, ಅದರ ಪದಾಧಿಕಾರಿಗಳಿಗಾಗಿ, ಎಲ್ಲಾ ಬಿಶೋಪರಿಗಾಗಿ, ಸಭಾಪಾಲಕರುಗಳಿಗಾಗಿ, ಸಭಾ–ಸೇವಕ–ಸೇವಕಿಯರಿಗಾಗಿ, ಸಿಸ್ಟರ್‌ಗಳಿಗಾಗಿ, 24 ಡಯಾಸಿಸ್‌ಗಳಿಗಾಗಿ, ಸಭೆಯ ನಿಯೋಗಿಕ ಕ್ಷೇತ್ರಗಳಿಗಾಗಿ, ಆಸ್ಪತ್ರೆಗಳಿಗಾಗಿ, ಕಾಲೇಜುಗಳಿಗಾಗಿ, ಶಾಲೆಗಳಿಗಾಗಿ, ವಿಶೇಷ ಸಾಮರ್ಥವಿರುವ ಮಕ್ಕಳ ಶಾಲೆಗಳಿಗಾಗಿ, ವೃದ್ಧಾಶ್ರಮಗಳಿಗಾಗಿ ಮತ್ತು ಅಶಕ್ತರ ವಸತಿನಿಲಯಗಳಿಗಾಗಿ ಮತ್ತು ದಕ್ಷಿಣ ಭಾರತ ಸಭೆಯಲ್ಲಿರುವ ನಾವು ನಮ್ಮ ಜೊತೆ ಸಹಭಾಗಿತ್ವದಲ್ಲಿರುವವರೆಲ್ಲರನ್ನೂ ನೆನಪಿಸಿಕೊಳ್ಳುತ್ತೇವೆ. ನಿನ್ನ ನಂಬಿಕೆಯ ಸಮುದಾಯವನ್ನಾಗಿ ಸಭೆಯನ್ನು ರೂಪಿಸು.

**ನಮ್ಮ ಮಧ್ಯೆ ವಾಸಿಸು ಮತ್ತು ವಿಶ್ವಾಸಿ ಅನ್ಯೋನ್ಯತೆಯ ಯಾತ್ರಾ ಪಯಣದೆಡೆಗೆ ನಿದರ್ಶಿಸು ಆಮೆನ್.**

**ಸಂಗೀತ/ಸಂಕೀರ್ತನೆ:**

**ಪ್ರಾರ್ಥನೆ :**

**ನಾಯಕ/ಕಿ:** ಅತ್ಯಂತ ಕೃಪಾಳು ದೇವರೇ, ನಮ್ಮ ಆರಾಧನೆಯಲ್ಲಿ ನಿನ್ನ ಕ್ಷಮಾ ಸಾನ್ನಿಧ್ಯವನ್ನು ಗುರುತಿಸುತ್ತೇವೆ. ಈ ಯಾತ್ರಾ ಪಯಣದಲ್ಲಿ ಕ್ಷಮಿಸಲು ಮತ್ತು ಸಂಧಾನವಾಗಲು ನಮ್ಮನ್ನು ಸಮರ್ಥರನ್ನಾಗಿಸು. ಕ್ಷಮಾಪಣೆಯ ಪರಿಣಾಮಗಳನ್ನು ಗ್ರಹಿಸಲು ಮತ್ತು ಸಂಧಾನಗೊಳ್ಳುವುದರಲ್ಲೇ ದೇವರ ರಾಜ್ಯದಲ್ಲಿ ಪಾಲುಗಾರರಾಗಬಲ್ಲೆವೆಂದು ಅರಿಯಲು ಸಶಕ್ತರನ್ನಾಗಿಸಲು. ನಿನ್ನ ಸಂಧಾನದ ಸೇವಕ ಸೇವಕಿಯರಾಗುವ ಕರೆಗೆ ಪ್ರತಿಸ್ಪಂದಿಸಿ ಆ ಕರೆಯನ್ನು ಸ್ವೀಕರಿಸಲು ತಿಳುವಳಿಕೆಯನ್ನು ನೀಡು.

**ಸಭೆ: ಆದ್ಯಂತನಾದ ದೇವರೇ, ಈ ದಕ್ಷಿಣ ಭಾರತ ಮಹಾಸಭೆಯ ಚರಿತ್ರೆಯಲ್ಲಿ ನಾವು ಕೇವಲ ಯಾತ್ರಿಕರು ಎಂಬುದನ್ನು ಅರಿಯಲು ಸಮರ್ಥರನ್ನಾಗಿಸು.. ನಮಗೆ ಪರಿಚಯವಿರುವ ಮತ್ತು ನಮ್ಮ ಸೌಕರ್ಯಯುತ ತಾಣಗಳನ್ನು ಬಿಟ್ಟುಬಿಡಲು ನಮಗೆ ಶಕ್ತಿನೀಡು. ಹೊಸ ಅನುಭವಗಳಿಗೆ ತೆರೆದುಕೊಳ್ಳಲು ನಮ್ಮ ಕಣ್ಣುಗಳನ್ನೂ ನಿನ್ನ ಸ್ವರವನ್ನು ಆಲಿಸಲು ನಮ್ಮ ಕಿವಿಗಳನ್ನೂ ನಿನ್ನ ಪ್ರೀತಿಯಿಂದ ತುಂಬಲು ಹೃದಯಗಳನ್ನೂ ಈ ಯಾತ್ರೆಯಲ್ಲಿ ನಾವು ನಮ್ಮನ್ನು ತಿಳಿದುಕೊಳ್ಳುವಂತೆಯೂ ನೀನು ಬಯಸುವಂತ ಜನರಾಗಲು ಶ್ರಮಿಸುವಂತೆಯೂ ನಿನ್ನ ಕೃಪೆಯನ್ನು ಅನುಗ್ರಹಿಸು.**

**ಕರ್ತನ ಪ್ರಾರ್ಥನೆ:**

**ದೇವರಾಶೀರ್ವಾದ:**

ನಿಮ್ಮನ್ನು ಸೃಷ್ಟಿಸಿದ ತಂದೆಯಾದ ದೇವರು ನಿಮ್ಮ ಹೆಜ್ಜೆಗಳನ್ನು ಮಾರ್ಗದರ್ಶಿಸಲಿ

ನಿಮ್ಮನ್ನು ವಿಮೋಚಿಸಿದ ಕುಮಾರನಾದ ದೇವರು ನಿಮ್ಮೊಂದಿಗೆ ಪಯಣಿಸಲಿ

ನಿಮ್ಮನ್ನು ಪ್ರತಿಷ್ಠಿಸುವ ಪವಿತ್ರಾತ್ಮನಾದ ದೇವರು ಜೀವನದ ಯಾತ್ರಾ ಪಯಣದಲ್ಲಿ ನಿಮ್ಮನ್ನು ಮುನ್ನಡೆಸಲಿ

ತಂದೆ, ಕುಮಾರ, ಪವಿತ್ರಾತ್ಮನಾದ ತ್ರಯೈಕ ದೇವರ ಆಶೀರ್ವಾದ ಈಗಲೂ ಎಂದೆಂದಿಗೂ ನಿಮ್ಮೊಂದಿಗಿರಲಿ. **ಆಮೆನ್.**

(ಕರ್ತನ ಭೋಜನ ಸಂಸ್ಕಾರವು ಆದರಿಸಲ್ಪಡುವುದು)